ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **23.01.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳು ಪರ: ವಕೀಲರ ಮೂಲಕ ಃ

**6. 1** ನೇ ಪ್ರತಿವಾದಿಯು ಮೃತರಾದ ನಂತರ ಅವರ ಮಗಳಿಗೆ ನಾನು ನೋಟೀಸ್‌ನ್ನು ಕಳುಹಿಸಿದ್ದೆ. **1** ನೇ ಪ್ರತಿವಾದಿಯ ಮಗಳ ಹೆಸರು ಜಯಲಲಿತ. **1** ನೇ ಪ್ರತಿವಾದಿಯ ಪತ್ನಿ ಮತ್ತು ಮಗಳು ನನಗೆ ಪರಿಚಯವಿರುವುದಿಲ್ಲ. **1** ನೇ ಪ್ರತಿವಾದಿಯು ಮೃತರಾದ ನಂತರ ಅವರ ಪತ್ನಿ ಮತ್ತು ಮಗಳ ಬಗ್ಗೆ ಗೊತ್ತಾಗಿರುತ್ತದೆ. **1** ನೇ ಪ್ರತಿವಾದಿಯ ಮಗಳಿಗೆ ಪತಿ ಇರಲಿಲ್ಲ ಎಂದರೆ ಸರಿ. ಸದರಿ ವಿಚಾರವು ಅವರಿಗೆ ನೋಟೀಸ್ ಕೊಟ್ಟ ನಂತರ ನನಗೆ ತಿಳಿದುಬಂದಿರುತ್ತದೆ. ಸದರಿಯವರಿಗೆ ಮಕ್ಕಳು ಇರುವುದಿಲ್ಲವೆಂದು ಬೇರೆಕಡೆಯಿಂದ ಗೊತ್ತಾಗಿರುತ್ತದೆ. ನನಗೆ ಒಬ್ಬ ಮಗನು ಇದ್ದು, ಈಗ ಮೃತರಾಗಿರುತ್ತಾರೆ. ಅವರಿಗೆ ವಿವಾಹವಾಗಿತ್ತು. ನನ್ನ ಸೊಸೆ ನನ್ನ ಜೊತೆ ವಾಸವಿರುತ್ತಾರೆ. ನನ್ನ ಸೊಸೆಯು ಈಗ ಬೆಂಗಳೂರಿನಲ್ಲಿ **2015** ರಿಂದ ವಾಸವಿರುತ್ತಾರೆ. ನನ್ನ ಪತ್ನಿ **2016** ರಲ್ಲಿ ಮೃತರಾಗಿರುತ್ತಾರೆ. ನಾನು ಮತ್ತು ನನ್ನ ಪತ್ನಿ ಮನೆಯಲ್ಲಿ ಇದ್ದು, ನನ್ನ ಸೊಸೆಯು ಪ್ರತ್ಯೇಕವಾಗಿ ಇದ್ದರು ಎಂದರೆ ಸರಿ. ನನ್ನ ಸೌಕರ್ಯವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ.

**7.** ನನ್ನ ಪತ್ನಿ ಮೃತರಾದ ನಂತರ ನಾನು ಪ್ರತಿವಾದಿ **1(**ಬಿ**)** ರವರನ್ನು ಕೂಡುವಳಿ ಮಾಡಿಕೊಳ್ಳಲು ಪ್ರಯತ್ನ ಪಟ್ಟೆ ಎಂದರೆ ನಾನು ಮಾಡಿರುವುದಿಲ್ಲ ಅವರ ತಮ್ಮನೇ ಬಂದು ಕೇಳಿರುತ್ತಾರೆ. ನಾನೇ ಸ್ವತಃ ಅವರ ಮನೆಗೆ ಕೂಡುವಳಿ ಮಾಡಿಕೊಳ್ಳಲು ಹೋಗಿದ್ದೆ ಎಂದರೆ ಸರಿಯಲ್ಲ. ನನ್ನ ಪತ್ನಿ ಮೃತರಾದ **1** ರಿಂದ **2** ವರ್ಷಗಳ ಒಳಗೆ ಆ ರೀತಿ ಕೂಡುವಳಿಯ ಮಾತುಕತೆಯಾಗಿರುತ್ತದೆ. ಸದರಿ ಸಂಗತಿಯನ್ನು **1** ನೇ ಪ್ರತಿವಾದಿಯ ಗಂಡು ಮಕ್ಕಳು ತಿರಸ್ಕರಿಸಿರುತ್ತಾರೆ ಎಂದರೆ ಅವರು ಹೇಳಿದ ನಂತರ ವಾಪಸ್ ಬಂದಿರುವುದಿಲ್ಲ. ಆ ರೀತಿ ತಿರಸ್ಕಾರ ಮಾಡಿದ ಉದ್ದೇಶದಿಂದ ನಾನು ನೋಟೀಸ್ ಕಳುಹಿಸಿದ್ದೆ ಎಂದರೆ ಸರಿ. ಪ್ರತಿವಾದಿಗಳು **2017** ರವರಗೆ **4** ಲಕ್ಷ ರೂಪಾಯಿಗಳಿಗೆ ಶೇಕಡ **1** ರಂತೆ ಬಡ್ಡಿಯನ್ನು ಪಾವತಿ ಮಾಡಿದ್ದರೂ ಸಹ ಕೂಡುವಳಿ ಮಾಡಿಕೊಡಲಿಲ್ಲ ಎಂಬ ಕಾರಣದಿಂದ ಸುಳ್ಳು ನೋಟೀಸ್‌ನ್ನು ಕಳುಹಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ **1(**ಬಿ**)** ರವರನ್ನು ಮದುವೆ ಮಾಡಿಕೊಟ್ಟರೆ ದಾವೆ ಸಲ್ಲಿಸುವುದಿಲ್ಲವೆಂದು ನಾನೇ **1** ನೇ ಪ್ರತಿವಾದಿ ಮನೆಗೆ ಹೋಗಿ ಹೇಳಿದ್ದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಲಪಟಾಯಿಸಲು **1** ನೇ ಪ್ರತಿವಾದಿಯ ಮನೆಗೆ ಹೋಗಿ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು **4** ಲಕ್ಷ ರೂಪಾಯಿಗಳನ್ನು ಸಾಲವಾಗಿ ನೀಡಿ **5** ಲಕ್ಷ ರೂಪಾಯಿಗಳಿಗೆ ಪತ್ರವನ್ನು ಬರೆಸಿಕೊಂಡು ಅಕ್ರಮವಾಗಿ ಲಾಭ ಪಡೆಯಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ **1** ಕ್ಕೆ ಸುಳ್ಳು ಸಾಕ್ಷಿದಾರರನ್ನು ಸೃಷ್ಟಿ ಮಾಡಿ,

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈಗಲೂ ಉಳಿದ ಬಡ್ಡಿಯನ್ನು **4** ಲಕ್ಷ ರೂಪಾಯಿಗಳಿಗೆ ಪಾವತಿ ಮಾಡಲು ತಯಾರು ಇರುತ್ತಾರೆ ಎಂದರೆ ಬಡ್ಡಿಗೆ ಮಾತುಕತೆ ಆಗಿರುವುದಿಲ್ಲ. ಹಣದ ಭದ್ರತೆಗಾಗಿ ನಿಪಿ **1** ನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡಲು ದಾವಾ ಸ್ವತ್ತನ್ನು ಬರೆಸಿಕೊಂಡಿರುವುದಿಲ್ಲ, ಸಾಲದ ಭದ್ರತೆಗೆ ಬರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷಿದಾರರ ಪ್ರಮಾಣ ಪತ್ರಗಳನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.